**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರ: 307/2017
ಪಿ.ಡಬ್ಲ್ಯೂ : 1

ದಿನಾಂಕ: 17-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ ಆರ್ ಪಿ ವಕೀಲರಿಂದ:

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈಗ ಯಾವುದೇ ಕೆಲಸ ಮಾಡುತ್ತಿರುವುದಿಲ್ಲ. ನಾನು ಅಂಪಾರು ಗ್ರಾಮದಲ್ಲಿ ವಾಸ ಇರುತ್ತೇನೆ. 1 ನೇ ವಾದಿ ಆನಂದ ಶೆಟ್ಟಿ ನನ್ನ ತಂದೆ. ವಾದಿ 2 ರಿಂದ 4 ರವರು ನಮ್ಮ ಸಹೋದರ ಅತ್ತೆಯವರು. ನಾನು ಸಾಕ್ಷಿಯನ್ನು ಎಲ್ಲಾ ವಾದಿಯವರ ಪರವಾಗಿ ಹೇಳುತ್ತಿರುತ್ತೇನೆ. ನನ್ನ ತಂದೆಗೆ ಹುಷಾರು ಇಲ್ಲದ ಕಾರಣ ನಾನು ಸಾಕ್ಷಿ ಹೇಳುತ್ತಿದ್ದೇನೆ. ಸಾಕಮ್ಮ ಶೆಟ್ಟಿಯವರಿಗೆ ಕಿವಿ ಕೇಳುವುದಿಲ್ಲ, ಉಳಿದವರು ಚೆನ್ನಾಗಿ ಇರುತ್ತಾರೆ.

2. ಸುಶೀಲ ಮತ್ತು ಸಾಕಮ್ಮರವರು ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ.ಅದನ್ನು ನ್ಯಾಯಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನಾಲ್ಕು ಜನ ವಾದಿಗಳು ನ್ಯಾಯಲಯಕ್ಕೆ ಬಂದರೆ ನಿಜ ಸಂಗತಿ ಹೊರಗೆ ಬರುತ್ತದೆ ಎಂಬ ಕಾರಣದಿಂದ ಅವರು ನ್ಯಾಯಲಯಕ್ಕೆ ಬರುತ್ತಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ಜಾಗಗಳು ಬೇರೆ ಬೇರೆ ಇರುತ್ತದೆ. ಒಟ್ಟಿಗೆ ಇರುವುದಿಲ್ಲ. ದಾವಾ ಆಸ್ತಿಗಳ ನಕ್ಷೆಯನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ.

3. ದಾವಾ ಐಟಂ ನಂಬ್ರ 1 ಸರ್ವೆ ನಂಬ್ರ 158/14 ರ ವಿಸ್ತೀರ್ಣ 17 ಸೆಂಟ್ಸ್ ನ ಉತ್ತರಕ್ಕೆ ಗದ್ದೆ ಇರುತ್ತದೆ, ಸಾಕ್ಷಿ ಪುನಃ ನಾಲ್ಕು ದಿಕ್ಕುಗಳಲ್ಲಿ ಗದ್ದೆ ಇದ್ದು ಸರ್ವೆ ನಂಬ್ರ 158/14 ಸಹ ಗದ್ದೆ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬ್ರ 158/29 18 ಸೆಂಟ್ಸ್ ಜಾಗ ಗೇರು ಗೀಡ ಇರುತ್ತದೆ. ಸದರಿ ಆಸ್ತಿಯ ಉತ್ತರಕ್ಕೆ ಗೇರು ಗೀಡ, ದಕ್ಷಿಣಕ್ಕೆ ರಸ್ತೆ, ಪೂರ್ವಕ್ಕೆ ಹಾಡಿ, ಪಶ್ಚಿಮಕ್ಕೆ ಗೇರು ಗೀಡ ಇರುತ್ತದೆ. ಉತ್ತರಕ್ಕೆ ಹಾಗೂ ಪಶ್ಚಿಮಕ್ಕೆ ಇರುವ ಗೇರು ಗಿಡ ನಾರುಮಕ್ಕಿ ರುದ್ರಮ್ಮ ಶೆಟ್ಟಿಯವರಿಗೆ ಸೇರಿದ ಜಾಗ ಆಗಿರುತ್ತದೆ.

4. ಸರ್ವೆ ನಂಬ್ರ 158/18 26 ಸೆಂಟ್ಸ್ ಜಾಗದ ಉತ್ತರಕ್ಕೆ ಮೀನಾಕ್ಷಿಯವರ ತೋಟ ಇರುತ್ತದೆ, ದಕ್ಷಿಣಕ್ಕೆ ಗದ್ದೆ ಇರುತ್ತದೆ, ಪೂರ್ವಕ್ಕೆ ಗದ್ದೆ ಇರುತ್ತದೆ, ಪಶ್ಚಿಮಕ್ಕೆ ಆನಂದ

ಶೆಟ್ಟಿಯವರ ಸಮುಷ್ಟಿ ಹಕ್ಕಿನ ತೋಟ ಇರುತ್ತದೆ. ಸದರಿ ಜಾಗದ ಒಳಗೆ ಒಂದು ಬಾವಿ ಇರುತ್ತದೆ. ಮನೆ ಇರುವುದಿಲ್ಲ. ಸರ್ವೆ ನಂಬ್ರ 158/18 ರ 26 ಸೆಂಟ್ಸ್ ಜಾಗದಲ್ಲಿ ಪ್ರತಿವಾದಿಗಳ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಬ್ರ 157/5 ರ 32 ಸೆಂಟ್ಸ್ ಜಾಗದ ಉತ್ತರಕ್ಕೆ ಮಕ್ಕಿ ಗದ್ದೆ, ದಕ್ಷಿಣಕ್ಕೆ ರಮಣ ಶೆಟ್ಟಿಯವರ ತೋಟ, ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಗದ್ದೆ ಇರುತ್ತದೆ. ಸದರಿ ಜಾಗ ಖಾಲಿ ಇರುತ್ತದೆ.

5. ಸರ್ವೆ ನಂಬ್ರ 157/5 ರ 32 ಸೆಂಟ್ಸ್ ಜಾಗದಲ್ಲಿ ಪ್ರತಿವಾದಿಗಳ ಹಟ್ಟಿ ಜಾಗ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ನಲ್ಲಿ ತೋರಿಸಿದ ಐಟಂ ನಂಬ್ರ 1 ರಿಂದ 8 ರ ಒಟ್ಟು ವಿಸ್ತೀರ್ಣ 4 ಎಕರೆ 83 ಸೆಂಟ್ಸ್ ಜಾಗ ನಮಗೆ ಸೇರಿದ್ದಾಗಿರುವುದಿಲ್ಲ. ಅದರಲ್ಲಿ 2.5 ಎಕರೆ ಜಾಗ ನಮಗೆ ಸೇರಿದ್ದಾಗಿರುತ್ತದೆ. 2.5 ಎಕರೆ ಜಾಗ ಕಟ್ಟಾಗಿರುವುದಿಲ್ಲ. ನಮಗೆ 2.5 ಎಕರೆ ಎಲ್ಲಿ ಬರುತ್ತದೆ ಎಂದು ಗೊತ್ತಿರುತ್ತದೆ.ಅದರ ಗಡಿಯನ್ನು ದಾವೆಯಲ್ಲಿ ತೋರಿಸಲಾಗಿರುತ್ತದೆ.

6. ನ್ಯಾಯಲಯದಲ್ಲಿ ಹಾಜರು ಪಡಿಸಿದ ದಾಖಲೆ ಹೊರತು ಪಡಿಸಿ ಬೇರೆ ದಾಖಲೆ ಹಾಜರು ಪಡಿಸಲು ಬಾಕಿ ಇರುವುದಿಲ್ಲ. ನಾನು ಹಾಜರು ಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಪ್ರತಿವಾದಿಗಳು ತಮ್ಮ ಉದಾಹರಣೆಯಲ್ಲಿ ಈ ಜಾಗ ಅವರದ್ದು ಎಂದು ತಿಳಿಸಿರುತ್ತಾರೆ. ಪ್ರತಿವಾದಿಗಳು ತಮ್ಮ ಉದಾಹರಣೆಯಲ್ಲಿ ಯಾವ ದಾಖಲೆಗಳ ಬಗ್ಗೆ ಉಲ್ಲೇಖ ಮಾಡಿರುತ್ತಾರೆ ಎಂದು ಗೊತ್ತಿರುತ್ತದೆ. ಆ ದಾಖಲೆಗಳನ್ನು ನಾನು ತೆಗೆದು ನೋಡಿರುತ್ತೇನೆ.

7. ಮೀನಾಕ್ಷಿಯವರು ದಾವಾ ಆಸ್ತಿಯ ಐಟಂ ನಂಬ್ರ 6 ರ ಸರ್ವೆ ನಂಬ್ರ 158/25 ರ 22 ಸೆಂಟ್ಸ್ ಜಾಗದಲ್ಲಿ 11 ಸೆಂಟ್ಸ್ ಜಾಗವನ್ನು ರಘು ಕೊಠಾರಿಯವರಿಗೆ ಮಾರಾಟ ಮಾಡಿರುತ್ತಾರೆ. ರಘು ಕೊಠಾರಿಯವರು ಮೃತ ಪಟ್ಟಿರುತ್ತಾರೆ. ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ. ನಿ.ಪಿ.2 ಮತ್ತು 3 ರ ಪ್ರಕಾರ ವಾದಿಯವರಿಗೆ ಅಣ್ಣಪ್ಪ ನಾಯಕ್ ಹಾಗೂ ಕಮಲಾಕ್ಷ ನಾಯಕ್ ರವರು ಒಟ್ಟು 6 ಎಕರೆ ಜಾಗವನ್ನು ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಯಲ್ಲಿ ಐಟಂ ನಂಬ್ರ 1 ರಿಂದ 5 ರಲ್ಲಿ ಅಣ್ಣಪ್ಪ ನಾಯಕ್ ರವರು ಸಮುಷ್ಟಿ 4/1 ಅಂಶ ನಮಗೆ ಮಾರಾಟ ಮಾಡಿರುತ್ತಾರೆ. ಉಳಿದ 4/1 ನೇ ಅಂಶವನ್ನು ಕಮಲಾಕ್ಷ ನಾಯಕ್ ರವರು ನಮಗೆ ಮಾರಾಟ ಮಾಡಿರುತ್ತಾರೆ.

8. ಅದೇ ರೀತಿ ಶೆಡ್ಯೂಲ್ ಸ್ವತ್ತುಗಳ 6 ರಿಂದ 8 ರಲ್ಲಿನ 1/8 ಅಂಶ ಸಮುಷ್ಟಿ ಹಕ್ಕನ್ನು ಅಣ್ಣಪ್ಪ ನಾಯಕ್ ಹಾಗೂ 1/8 ಅಂಶ ಸಮುಷ್ಟಿ ಹಕ್ಕನ್ನು ಕಮಲಾಕ್ಷ ನಾಯಕ್ ರವರು ನಮಗೆ ಮಾರಾಟ ಮಾಡಿರುತ್ತಾರೆ. ನಿ.ಪಿ.2 ಮತ್ತು 3 ರಲ್ಲಿ ಸದರಿ ಜಾಗದ ಗಡಿಗಳನ್ನು ತೋರಿಸಿರುವುದಿಲ್ಲ. ಅಣ್ಣಪ್ಪ ನಾಯಕ್ ಹಾಗೂ ಕಮಲಾಕ್ಷ ನಾಯಕ್ ರವರಿಗೆ ಸದರಿ ದಾವಾ ಸ್ವತ್ತುಗಳು ನಿ.ಪಿ.5 ರಂತೆ ಬಂದಿರುತ್ತದೆ ಎಂದರೆ ಸರಿ. ನಿ.ಪಿ.5 ರಲ್ಲೂ ದಾವಾ ಆಸ್ತಿಗಳ ಸಮುಷ್ಟಿ ಹಕ್ಕಿನ ಚೆಕ್ಕುಬಂದಿಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

9. ಶೆಡ್ಯೂಲ್ ಸ್ವತ್ತಿನ ಅಣ್ಣಪ್ಪ ನಾಯಕ್ ಹಾಗೂ ಕಮಲಾಕ್ಷ ನಾಯಕ್ ರವರು ಐಟಂ ನಂಬ್ರ 1 ರಿಂದ 5 ಸ್ವತ್ತುಗಳಲ್ಲಿ ಮಾರಾಟ ಮಾಡಿದ ಸಮುಷ್ಟಿ 1/4 ಅಂಶವನ್ನು ಹೊರತು ಪಡಿಸಿ ಉಳಿದ 2/4 ಅಂಶ ಸಮುಷ್ಟಿ ಹಕ್ಕು ಮಂಜಮ್ಮ ಶೆಡ್ತಿಯವರ ಕುಟುಂಬಕ್ಕೆ ಸೇರಿತ್ತು. ಪ್ರತಿವಾದಿಗಳು ಮಂಜಮ್ಮ ಶೆಡ್ತಿಯವರ ಕುಟುಂಬಕ್ಕೆ ಸೇರಿದವರು. ಮಂಜಮ್ಮ ಶೆಡ್ತಿಯವರಿಗೆ 3 ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಅವರುಗಳ ಹೆಸರು ರಾಮಣ್ಣ ಶೆಟ್ಟಿ ರಘುರಾಮ ಶೆಟ್ಟಿ ಕೃಷ್ಣಪ್ಪ ಶೆಟ್ಟಿ ಸುಶೀಲಾ, ಮೀನಾಕ್ಷಿ.

10. ಶೆಡ್ಯೂಲ್ ಸ್ವತ್ತಿನ ಐಟಂ ನಂಬ್ರ 6 ರಿಂದ 8 ರಲ್ಲಿ 2/8 ಅಂಶವನ್ನು ನಾವು ತೆಗೆದುಕೊಂಡಿದ್ದು ಉಳಿದ 6/8 ಅಂಶವನ್ನು ಬಚ್ಚಮ್ಮ ಹಾಗೂ ಕನಕಮ್ಮ ಶೆಟ್ಟೆಯವರ ಕುಟುಂಬಕ್ಕೆ ಸೇರಿದ್ದಾಗಿರುತ್ತದೆ. ಸದರಿ ಬಚ್ಚಮ್ಮ ಹಾಗೂ ಕನಕಮ್ಮ ಶೆಟ್ಟೆಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ, ಸೇರಿಸಲು ತೊಂದರೆ ಇರುವುದಿಲ್ಲ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**